ದಿ:೨೮-೨-೨೦೧೮ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮಧ್ಯಂತರ ಅರ್ಜಿ ೪ರ ಮೇಲೆ ಆದ ಆದೇಶದ ಮೇರೆಗೆ ಮುಂದುವರಿದ ಪಾಟೀಸವಾಲು ೩ನೇ ಕ್ಲೇಮುದಾರರ ಪರ ಶ್ರೀ ಕೆ.ಎಲ್.ಸಿ ವಕೀಲರಿಂದ :

ಈ ಕೇಸಿಗೆ ಸಂಬಂಧಪಟ್ಟಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲೆ ಆಗಿರುವ ರಿಟ್ ಅರ್ಜಿಯ ನಂಬರ್. ೫೩೧೫/೧೫ ಎಂದರೆ ಸರಿ. ಸದರಿ ರಿಟ್ ಅರ್ಜಿಯನ್ನು ಕೆಎಟಿ ಅವರು ಅಪಿಲ್ ನಂಬರ. ೫೭೩/೨೦೧೨ ರಲ್ಲಿ ಮಾಡಿದ ಆದೇಶದ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿ. ನಿ.ಪಿ.೧೨ ರ ರಸೀದಿಗಳನ್ನು ನಾನು ಖುದ್ದು ನೋಡಿರುವುದಿಲ್ಲ. ನಿ.ಪಿ.೧೧ ರಿಂದ ೧೩ ರ ದಾಖಲೆಗಳನ್ನು ೨೦೧೭ ರಲ್ಲಿ ತೆಗೆದುಕೊಂಡಿರುತ್ತದೆ. ಅವುಗಳ ಮೂಲ ದಾಖಲೆಗಳು ೮ ನೇ ಕ್ಲೇಮುದಾರರ ಕಛೇರಿಯಲ್ಲಿ ಇರುತ್ತವೆ. ನಿ.ಪಿ.೧೨ ರ ರಸೀದಿಗಳಲ್ಲಿ ಸೊಸೈಟಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಸಹಿ ಇಲ್ಲ ಎಂದರೆ ಸರಿ. ನಿ.ಪಿ.೧೧ ರಿಂದ ೧೩ ರ ದಾಖಲೆಗಳನ್ನು ೮ ನೇ ಕ್ಲೇಮುದಾರರ ಜೊತೆ ಶಾಮೀಲಾಗಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ೧, ೨ ಮತ್ತು ೪ ರಿಂದ ೬ ನೇ ಕ್ಲೇಮುದಾರರ ವಿರುದ್ಧ ಸಾಲ ವಸೂಲಾತಿಗಾಗಿ ಯಾವುದೇ ಕೇಸು ದಾಖಲೆ ಮಾಡಿರುವುದಿಲ್ಲ. ಜಮೀನು ನೈಸ್ ರಸ್ತೆಗೆ ಸ್ವಾಧೀನ ಪಡಿಸಿಕೊಂಡಿದ್ದನ್ನು ಪ್ರಶ್ನಿಸಿರುವುದಿಲ್ಲ. ನಿ.ಪಿ.೧೧ ರಿಂದ ೧೩ ದಾಖಲೆಗಳ ಧೃಡೀಕರಿಸಿ ನೀಡಿದ ವ್ಯಕ್ತಿಯೇ ಇಲ್ಲ ಎಂದರೆ ಸರಿಯಲ್ಲ. ೮ ನೇ ಕ್ಲೇಮುದಾರರ ಸೊಸೈಟಿಯನು ಸೂಪರ್ ಸೀಜ್ ಮಾಡಿ ಸರಕಾರದವರು ಅಡ್ಮಿನಿಸ್ಟ್ರೇಟರನ್ನು ಯಾವಾಗ ನೇಮಕ ಮಾಡಿದರೆಂದು ಗೊತ್ತಿಲ್ಲ.

ಮರುವಿಚಾರಣೆ : ಇಲ್ಲ.

**<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)</u>**

ಓ. ಹೇ. ಕೇ. ಸರಿ ಇದೆ,

(ಚಂದ್ರಶೇಖರ್.ಪಿ.ಎಸ್)
೨ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾದೀಶರು
**ಬೆಂಗಳೂರು**